**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ.384/2018**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ನಾಗರಾಜ ಮತ್ತು ಇತರರು

-ಃದೋಷಾರೋಪಣೆಃ-

ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್ಸಿ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ನಾಗರಾಜ ಇ ಆರ್ ಯಾನೆ ನಾಗ ಬಿನ್ ಲೇಟ್ ರವಿಶಂಕರ, 23 ವರ್ಷ, ಕೂಲಿ ಕೆಲಸ, ವಾಸಃ4 ನೇ ಕ್ರಾಸ್, ತರೀಕೆರೆ ನಾಗರ.
2. ಸುರೇಶ ಬಿನ್ ರಂಗನಾಥ, 23 ವರ್ಷ, ಗಾರೆ ಕೆಲಸ, ವಾಸಃ ಇಂದಿರಾನಗರ, ತರೀಕೆರೆ.
3. ರವಿ ಲೇಟ್ ಪೆದ್ದಪ್ಪ, 41 ವರ್ಷ, ಗಾರೆ ಕೆಲಸ, ವಾಸಃಕೌನ್ಸಿಲರ್ ಕೃಷ್ಣಪ್ಪರವರ ಮನೆ ಪಕ್ಕ, 2 ನೇ ಕ್ರಾಸ್, ಇಂದಿರಾನಗರ, ತರೀಕೆರೆ.
4. ನಿಂಗಾನಾಯ್ಕ ಬಿನ್ ಸೋಮ್ಲಾನಾಯ್ಕ, 55 ವರ್ಷ, ಕೂಲಿ ಕೆಲಸ, ವಾಸಃನಾಗೇನಹಳ್ಳಿ ತಾಂಡ್ಯ, ಅಮೃತಾಪುರ ಹೋಬಳಿ, ತರೀಕೆರೆ ತಾಃ
5. ಮಾಣಿಕ್ಯ (ಮೃತಪಟ್ಟಿರುತ್ತಾರೆ)
6. ಪ್ರವೀಣ, ವಾಸಃ ಕರಕುಚ್ಚಿ ತಾಂಡ್ಯ, ತರೀಕೆರೆ ತಾಃ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

2016 ನೇ ನವೆಂಬರ್ ತಿಂಗಳಲ್ಲಿ ಒಂದು ದಿನ ರಾತ್ರಿ ವೇಳೆಯಲ್ಲಿ 4 ರಿಂದ 6 ನೇ ಆರೋಪಿತರು ಎಂ ಸಿ ಹಳ್ಳಿ ಗ್ರಾಮದ ನೀಲಗಿರಿ ಪ್ಲಾಂಟೇಷನ್ನಿನಲ್ಲಿ 4 ನೇ ಆರೋಪಿಯ ಬಳಿ ಇದ್ದ ಒಂಟಿ ನಳಿಕೆಯ ಒಂದು ಅಕ್ರಮ ನಾಡ ಬಂದೂಕನ್ನು ತೆಗೆದುಕೊಂಡು ಹೋಗಿ, ಪ್ಲಾಂಟೇಷನ್ನಿನಲ್ಲಿದ್ದ ಒಂದು ಮರಿ ಚಿರತೆಯನ್ನು ಗುಂಡು ಹಾರಿಸಿ ಸಾಯಿಸಿ, 4 ರಿಂದ 6 ನೇ ಆರೋಪಿತರು ಸದರಿ ಮರಿ ಚಿರತೆಯ ಚರ್ಮವನ್ನು ಸುಲಿದು ಒಣಗಿಸಿ, ಯಾರಾದರೂ ಗಿರಾಕಿ ಬಂದರೆ ಸದರಿ ಚರ್ಮವನ್ನು ಮಾರಾಟ ಮಾಡಲು 1 ರಿಂದ 3 ನೇ ಆರೋಪಿತರಾದ ನಿಮಗೆ

ಕೊಟ್ಟಿದ್ದು, ಆ ಮೂಲಕ ಕಲಂ**.9, 39, 40, 49(**ಬಿ**), 50, 51** ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತು ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, 4 ರಿಂದ 6 ನೇ ಆರೋಪಿತರು ಎಂ ಸಿ ಹಳ್ಳಿ ಗ್ರಾಮದ ನೀಲಗಿರಿ ಪ್ಲಾಂಟೇಷನ್ನಿನಲ್ಲಿ 4 ನೇ ಆರೋಪಿಯ ಬಳಿ ಇದ್ದ ಒಂಟಿ ನಳಿಕೆಯ ಒಂದು ಅಕ್ರಮ ನಾಡ ಬಂದೂಕನ್ನು ತೆಗೆದುಕೊಂಡು ಹೋಗಿ, ಪ್ಲಾಂಟೇಷನ್ನಿನಲ್ಲಿದ್ದ ಒಂದು ಮರಿ ಚಿರತೆಯನ್ನು ಗುಂಡು ಹಾರಿಸಿ ಸಾಯಿಸಿದ್ದು, ಆ ಮೂಲಕ ನೀವು ಕಲಂ**.25** ರ ಭಾರತೀಯ ಆಯುಧ ಕಾಯಿದೆ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಸದರಿಯವರು ದಿನಾಂಕಃ05.01.2017 ರಂದು ಬೆಳಿಗ್ಗೆ 7-00 ಗಂಟೆಗೆ ತರೀಕೆರೆ ಪಟ್ಟಣದ ಹೊರವಲಯದ ತುದಿಪೇಟೆ ಮಾಚೇನಹಳ್ಳಿ ಹತ್ತಿರ ದುರ್ಗಾಪುರ ರಸ್ತೆಯಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಮೋಟಾರ್ ಸೈಕಲ್ ನಂ.ಕೆಎ-18/ಡಬ್ಲ್ಯೂ -6875 ರಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಚಿರತೆಯ ಚರ್ಮವನ್ನು ಕಳ್ಳತನದಿಂದ ಮಾರಾಟ ಮಾಡಲು ಬಂದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ**.379** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ06.01.2025

ಸಹಿ/-
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಎ-1
ಎ-2
ಎ-3
ಎ-4
ಎ-6

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ

ಎ-1
ಎ-2
ಎ-3
ಎ-4

ಎ-6

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)
ದಿನಾಂಕಃ06.01.2025

ಸಹಿ/-
ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿ/ತರ ಸಹಿಃ